

ಕೊರೊನಾ ವೈರಾಣು ಸೋಂಕಿನ ನಿಯಂತ್ರಣಕ್ಕಾಗಿ ವಿಧಿಸಲಾಗಿದ್ದ ಲಾಕ್‌ಡೌನ್ ತೆರವುಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ವಿಶ್ವದ ವಿವಿಧ ಭಾಗಗಳಲ್ಲಿನ ಪ್ರವಾಸೋದ್ಯಮ ಚಟುವಟಿಕೆಗಳು ನಿಧಾನವಾಗಿ ಗರಿಗೆದರುತ್ತಿವೆ. ಹಾಂಕಾಂಗ್‌ನಲ್ಲಿನ ಐಕಾನಿಕ್ ಥೀಮ್ ಪಾರ್ಕ್ 'ಓಷನ್ ಪಾರ್ಕ್' ಪ್ರವಾಸಿಗರಿಗೆ ಮತ್ತೆ ತೆರೆದುಕೊಂಡಿರುವ ಸಂದರ್ಭದಲ್ಲಿ, ಪ್ರದರ್ಶನಕಾರನೊಬ್ಬನ ಜೊತೆಗೆ ಕುಟುಂಬವೊಂದು ತೆಗೆಸಿಕೊಂಡಿರುವ ಈ ಫೋಟೊ, ಕೊರೊನಾದೊಂದಿಗಿನ ಹೊಂದಾಣಿಕೆಯ ಬದುಕಿನ ಸ್ವರೂಪದ ಚಿತ್ರಣದಂತಿದೆ. ಫೋಟೊ: ರಾಯಿಟರ್ಸ್